ಹುದ್ದೆಗಳಿರುವುದಿಲ್ಲ. ಪ್ರತಿ ಪ್ರಥಮ ದರ್ಜೆ ಕಾಲೇಜಿನ ಬೋಧಕ ವರ್ಗದವರ ಪೈಕಿ ಸೇವಾ ಹಿರಿತನದಲ್ಲಿ ಹಿರಿಯರಾದವರನ್ನು ಆ ಕಾಲೇಜಿನ ಪ್ರಾಚಾರ್ಯರನ್ನಾಗಿ (ಪ್ರಿನ್ಸಿಪಾಲರನ್ನಾಗಿ) ನೇಮಕ ಮಾಡಲಾಗುತ್ತಿದೆ. ಆದ್ದರಿಂದ ಪ್ರಾಚಾರ್ಯರ (ಪ್ರಿನ್ಸಿಪಾಲರ) ಹುದ್ದೆಗಳು ಖಾಲಿ ಇರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) 14.

ಇ) ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು 1991-92ನೇ ಶೈಕ್ಷಣಿಕ ವರ್ಷದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸುರತ್ಕಲ್‌ನಲ್ಲಿ ಬಸ್ಸು ನಿಲ್ದಾಣದ ನಿರ್ಮಾಣ

1133 - ಶ್ರೀ ವಿಜಯಕುಮಾರಶೆಟ್ಟಿ (ಸುರತ್ಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ, ಸುರತ್ಕಲ್‌ನಲ್ಲಿ ಕೆಎಸ್‌ಆರ್‌ಟಿಸಿ, ಬಸ್ ನಿಲ್ದಾಣ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?*

ಆ) *ಈ ಮೇಲ್ಕಂಡ ಬಸ್ ನಿಲ್ದಾಣವು ಅತಿ ಅವಶ್ಯಕವಾಗಿದ್ದು ಸರ್ಕಾರ ಎಷ್ಟು ದಿನಗಳಲ್ಲಿ ನಿಲ್ದಾಣವನ್ನು ನಿರ್ಮಿಸುವುದು?*

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು)

ಅ) ಇಲ್ಲ

ಆ) ಇದು ರಾಷ್ಟ್ರೀಕರಣವಾಗದ ವಲಯದಲ್ಲಿದೆ ಮತ್ತು ಕೆಲವು ಕೆಎಸ್‌ಆರ್‌ಟಿಸಿ, ಬಸ್ಸುಗಳು ಮಾತ್ರ ಈ ಮಾರ್ಗವಾಗಿ ಸಂಚರಿಸುತ್ತವೆ. ಈ ಪಟ್ಟಣದ ಹೆಚ್ಚಿನ ಸಾರಿಗೆ ಅವಶ್ಯಕತೆಗಳನ್ನು ಖಾಸಗಿ ವಾಹನಗಳು ಪೂರೈಸುತ್ತಿವೆ. ಆದರೆ ಸ್ಥಳೀಯ ಅಧಿಕಾರಿಗಳು ಬಸ್ ನಿಲ್ದಾಣವನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ ಬಸ್ ನಿಲ್ದಾಣವನ್ನು ನಿರ್ಮಿಸಲು ಸುರತ್ಕಲ್ ಮುನಿಸಿಪಾಲಿಟಿಯವರನ್ನು ಕೇಳಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ವಿಶ್ವವಿದ್ಯಾಲಯಕ್ಕಾಗಿ ಆರ್ಥಿಕ ಸಹಾಯ

1222 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ವಿಶ್ವವಿದ್ಯಾಲಯ ಸ್ಥಾಪನೆ ಯಾದಾಗಿನಿಂದ ಈವರೆಗೆ ರಾಜ್ಯ ಸರ್ಕಾರ ಹಾಗೂ ಯು.ಜಿ.ಸಿ. ಯಿಂದ ಪಡೆದಿರುವ ಆರ್ಥಿಕ ಸಹಾಯವೆಷ್ಟು?*

ಆ) *ಮಂಗಳೂರು ವಿಶ್ವವಿದ್ಯಾಲಯ ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಮಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಮಡಿಕೇರಿಯಲ್ಲಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :

ಅ) ರಾಜ್ಯ ಸರ್ಕಾರದಿಂದ ರೂ. 19,73,44,004-00

ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ : ರೂ. 1,31,94,966-90.

ಆ) ಇಲ್ಲ